ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

**ಸಿಸಿ ನಂ. 385/2018**

| ಫಿರ್ಯಾದಿ | | ಆರೋಪಿ |
|---|---|---|
| ಶ್ರೀರಾಮ ಟ್ರಾನ್ಸಪೋರ್ಟ ಪೈನಾನ್ಸ ಕಂ. ಲಿ. ಶಾಖೆ ಕುಮಟಾ | ವಿರುದ್ಧ | ಮೊಹಮ್ಮದಅಲಿ S/o ಮೊಹಮ್ಮದಸಾಬ ಸಾಕ್ರಿ |

ಆರೋಪಿಃ

ಮೊಹಮ್ಮದಅಲಿ S/o ಮೊಹಮ್ಮದಸಾಬ ಸಾಕ್ರಿ ,
ಅಜಮಾಸ 49 ವರ್ಷ, ಉಃ ವ್ಯವಹಾರ,
ಸಾಃ ಎಚ್.ನಂ. 1238, 18 ಫೀಟ ರಸ್ತೆ,
ಮಾರುತಿ ಗಲ್ಲಿ , ದಾಂಡೇಲಿ . (ಉ.ಕ.)

– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ನೀವು ವಾಹನ ಸಂಖ್ಯೆ ಕೆಎ 25/ಎ-2392 ರ ಸಲುವಾಗಿ ಪಿರ್ಯಾದುದಾರರ ಸಂಸ್ಥೆಯೊಂದಿಗೆ ಒಟ್ಟೂ ರೂ . 4,86,400/- ಗಳ ಕರಾರನ್ನು ಮಾಡಿಕೊಂಡು ರೂ.3,20,000/- ನ್ನು ಪಿರ್ಯಾದುದಾರರ ಸಂಸ್ಥೆಯಿಂದ ಸಾಲವನ್ನು ಪಡೆದಿದ್ದು, ಸದರ ಸಾಲದ ತೀರುವಳಿಯ ಸಲುವಾಗಿ ನೀವು ದಿಃ 12-01-2013 ನೇದರ ಕಾರ್ಪೊರೇಷನ್ ಬ್ಯಾಂಕ, ದಾಂಡೇಲಿ ಶಾಖೆಯ ಚೆಕ್ ನಂ. 071729 ನ್ನು ರೂ. 4,00,000/- ಕ್ಕೆ ಫಿರ್ಯಾದುದಾರರಿಗೆ ನೀಡಿದ್ದು, ಸದರಿ ಚೆಕ್‌ನ್ನು ನಗದೀಕರಿಸಲು ಕುಮಟಾ ಶಾಖೆಯ ಎಚ್ ಡಿ ಎಫ್ ಸಿ ಬ್ಯಾಂಕ್ ಗೆ ಹಾಜರು ಪಡಿಸಿದಾಗ ನಿಮ್ಮ ಚೆಕ್ ಖಾತೆಯು ''FUNDS INSUFFICIENT" ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ದಿಃ 16-01-2013 ರಂದು ವಾಪಸ್ಸು ಬಂದಿದ್ದು, ಈ ಕುರಿತು ನಿಮಗೆ ದಿಃ 02-02-2013 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು, ಸದ್ರಿ ನೋಟಿಸು ದಿಃ 08-02-2013 ರಂದು ನಿಮಗೆ ತಲುಪಿದ್ದು , ಸದ್ರಿ ನೋಟಿಸು ನಿಮಗೆ ಜಾರಿಯಾಗಿದ್ದರೂ ಸಹ ಚೆಕ್ ನಲ್ಲಿ ಹೇಳಿದ ಹಣವನ್ನು ವಾಪಸ್ಸು ಕೊಡದೇ ಕಲಂ 138 ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ –

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 16–01–2023.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ